ಇ) ಬೆಳೆಗಳನ್ನು ಕೀಟ-ರೋಗಗಳಿಂದ ಸಂರಕ್ಷಿಸುವ ಸಲುವಾಗಿ ಇಲಾಖೆಯಿಂದ ಸಹಾಯಧನದ ರೂಪದಲ್ಲಿ ಕೀಟನಾಶಕಗಳು, ಶಿಲೀಂಧ್ರ ನಾಶಕಗಳು, ಜೈವಿಕ ಪೀಡೆನಾಶಕಗಳು, ಕಳೆನಾಶಕಗಳನ್ನು ವಿತರಿಸಲಾಗುತ್ತಿದೆ.

ಈ) ಈ ಔಷಧಿಗಳನ್ನು ವಿವಿಧ ಅಧಿಕೃತ ಔಷಧಿ ಸರಬರಾಜು ದಾರರಿಂದ ಟೆಂಡರ್ ಕರೆಯುವ ಮೂಲಕ ಖರೀದಿಸಲಾಗುತ್ತದೆ.

ಉ) ವಿವಿಧ ಪೀಡೆನಾಶಕಗಳನ್ನು ಸಹಾಯಧನದ ರೂಪದಲ್ಲಿ ವಿತರಿಸಲು ರೂ. 6.5 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

1234 (1550) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಿಂದುಳಿದ ಗಡಿ ಪ್ರದೇಶ, ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು;

ಆ) ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗುವುದೇ; ಹಾಗಿದ್ದಲ್ಲಿ ಮಂಜೂರಾತಿಗಾಗಿ ಇರುವ ಮಾನದಂಡವೇನು;

ಇ) ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ಪ್ರತಿಯೊಬ್ಬ ಫಲಾನುಭವಿಗಳ ಆಹಾರ ಪದಾರ್ಥಗಳನ್ನು ಸರಿಯಾಗಿ ವಿತರಣೆ ಮಾಡಲಾಗುತ್ತಿದೆಯೇ;

ಈ) ಇಲ್ಲದಿದ್ದಲ್ಲಿ, ಆ ನ್ಯಾಯ ಬೆಲೆ ಅಂಗಡಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ದಿನಾಂಕ: 30-6-2007ರ ಅಂತ್ಯಕ್ಕೆ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿರುವ ಒಟ್ಟು ನ್ಯಾಯಬೆಲೆ ಅಂಗಡಿಗಳ ಸಂಖ್ಯೆ 20.553, ಚಾಮರಾಜನಗರ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ 441.

ಆ) ಹೌದು.

ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣೆ ಪದ್ಧತಿ) ನಿಯಂತ್ರಣ ಆದೇಶ 1992ರನ್ವಯ ಹಾಗೂ ಸರ್ಕಾರ ಹೊರಡಿಸಿರುವ

ಸುತ್ತೋಲೆಗಳನ್ವಯ ಈ ಕೆಳಕಂಡ ಮಾನದಂಡಗಳಿಗೊಳಪಟ್ಟು ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗುವುದು.

ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಠ 300 ಪಡಿತರ ಚೀಟಿಗಳು ಹಾಗೂ ನಗರ ಪ್ರದೇಶದಲ್ಲಿ ಕನಿಷ್ಠ 500 ಪಡಿತರ ಚೀಟಿಗಳು ಲಭ್ಯವಿರಬೇಕು.

1) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಾನ್ಯತೆ ಪಡೆದು ಕನಿಷ್ಠ 1 ವರ್ಷದಿಂದ ಅಸ್ತಿತ್ವದಲ್ಲಿರುವ ಸ್ತ್ರೀಶಕ್ತಿ ಸಂಘಗಳು.
2) ಗ್ರಾಹಕರ ಸಹಕಾರ ಸಂಘಗಳು.
3) ಸಹಕಾರ ಸಂಘಗಳು.
4) ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರನ್ವಯ ನೊಂದಾವಣೆಯಾಗಿರುವ ಸಂಘ ಸಂಸ್ಥೆಗಳು.
5) ಮೇಲ್ಕಂಡ ಪ್ರವರ್ಗದಲ್ಲಿ ಸೂಕ್ತ ಅಭ್ಯರ್ಥಿಗಳು ಸಿಗದಿದ್ದಲ್ಲಿ 18 ವರ್ಷ ತುಂಬಿದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೇರ್ಗಡೆಯಾದ ವ್ಯಕ್ತಿಗಳಿಗೆ ಕೆಳಕಂಡ ಆದ್ಯತೆಯನ್ವಯ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗುವುದು.
    i) ಪರಿಶಿಷ್ಟ ಜಾತಿ
    ii) ಪರಿಶಿಷ್ಟ ಪಂಗಡ
    iii) ನಿರುದ್ಯೋಗಿ ಪದವೀಧರರು
    iv) ಅಂಗವಿಕಲರು
    v) ಮಾಜಿ ಸೈನಿಕರು
    vi) ಇತರೆ

ಇ) ಹೌದು. ಆಹಾರಧಾನ್ಯಗಳ ಸಮರ್ಪಕ ವಿತರಣೆಯಾಗುತ್ತಿರುವುದನ್ನು ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ಕ್ರಮವಹಿಸುತ್ತಿದ್ದಾರೆ.

ಈ) ಯಾವುದೇ ನ್ಯಾಯ ಬೆಲೆ ಅಂಗಡಿಯವರು ಪಡಿತರ ವಸ್ತುಗಳ ವಿವರಣೆಯಲ್ಲಿ ಲೋಪವೆಸಗಿದಲ್ಲಿ ಅಂತಹ ನ್ಯಾಯ ಬೆಲೆ ಅಂಗಡಿಯವರ ಮೇಲೆ ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ಪ) ನಿಯಂತ್ರಣ ಆದೇಶ 1992ರಂತೆ ಮಂಜೂರು ಮಾಡಲಾದ ಪ್ರಾಧಿಕಾರವನ್ನು ರದ್ದುಪಡಿಸಲು ಕ್ರಮವಹಿಸಲಾಗುತ್ತಿದೆ.